

# ಕನ್ನಡ ಕನ್ನಡ ನಮ್ಮೆಯ ಕನ್ನಡ

■ ಸಿದ್ದಯ್ಯ ಹಿರೇಮಠ
ಕಲೆ: ಸಂತೋಷ್ ಸಸಿಹಿತ್ಲು

ಕನ್ನಡ ಎಂದಿಗು ಚಂದದ ನುಡಿಯು
ಸುಂದರ ಸುಮಧುರ ಗಂಧದ ಗುಡಿಯು
ಕನ್ನಡವದುವೇ ನಲ್ಮೆಯ ಭಾಷೆ
ಸ್ವಚ್ಛವು ಸ್ಫುಟವು ಅಂದದ ಒರಸೆ
ಅಕ್ಷರಗಳವು ಮುತ್ತಿನ ಸರವು
ನಕ್ಷತ್ರಗಳವು ನಾಚುವ ಪರಿಯು
ನಿರಕ್ಷರಿಯನು ಸೆಳೆಯುವ ಸ್ವರವು
ಅನ್ಯರ ಪದವದು ನಶ್ವರ ಸರಿಯು

ಕನ್ನಡ ಕನ್ನಡ ಹಾಸವಿಗನ್ನಡ
ಅಂದಿಗು ಇಂದಿಗು ಸತ್ಯಕೆ ಸಂಗಡ
ಮಿಂಚಿದು, ಗುಡುಗಿದು ಬೆಳಕಿದು ಕನ್ನಡ
ಸಿಹಿಯಿದು ಸವಿಯಿದು ನೆಚ್ಚಿನ ಕನ್ನಡ
ಅಂತಿಂಥದ್ದಲ್ಲ ನಮ್ಮೆಯ ನಾಡು
ಕರುಣೆಯ ಸಾಗರ ಈ ಕರುನಾಡು
ತುಂಗಭದ್ರೆಯ ಝುಳುಝುಳು ನಾದ
ಕೃಷ್ಣೆ, ಮಲಪ್ರಭೆಯರ ಚೆಲುವದು ಅಂದ
ಕಾವೇರಿ, ವರದೆಯರ ಹರಿವದು ಚಂದ
ಜೇನಿನ ನುಡಿಯಿದು ಸಿಹಿ ಮಕರಂದ
ಕನ್ನಡ ಎನೆ ನನ್ನೆದೆಯಲಿ ಬಲವು
ಕನಸಲು ನನಸಲು ಇದರದೆ ಒಲವು
ಹೃದಯದ ಮಾತಿದು ಸಾವಿರ ಸಲವು
ಬಿಡೆವು ಎಂದಿಗಿದು ನಮ್ಮೆಯ ಛಲವು ■

## ಕುಂಚ ಪ್ರಪಂಚ

ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ. **ವಿಳಾಸ:** editorsu@sudha.co.in





**ಹರಿ ಸುಂದರ್ ಕೌಶಿಕ್**
7ನೇ ತರಗತಿ, ಜ್ಞಾನಜ್ಯೋತಿ ಶಾಲೆ, ಯಲಹಂಕ, ಬೆಂಗಳೂರು



**ನಿಯತಿ ನಾವಡ ಪಡುಕೋಣೆ**
6ನೇ ತರಗತಿ, ಸಿದ್ಧಿವಿನಾಯಕ ರೆಸಿಡೆನ್ಸಿಯಲ್ ಸ್ಕೂಲ್, ಕುಂದಾಪುರ

